

# ಮೀಟಿಯೋರಾ... ಓ ಮೀಟಿಯೋರಾ...

**ಕಲಂಬಾಕದ ಬೆನ್ನಿಗೆ ನಿಂತಿದ್ದ ಮೀಟಿಯೋರಾದ ಬಾನೆತ್ತರದ ಬಂಡೆಗಳು ಯಾವುದೊ ಇಂಗ್ಲಿಷ್ ಸಿನಿಮಾದ ದೃಶ್ಯಗಳನ್ನು ನೆನಪಿಸುವಂತಿದ್ದವು. ಅವುಗಳೊಂದರ ಮೇಲೆ ನಿರ್ಮಿತವಾಗಿದ್ದ ಪುಟ್ಟ ಕಟ್ಟಡವೊಂದು ಕೆಳಗಿಣುಕಿ ನೋಡುತ್ತಿತ್ತು. ಪ್ರಕೃತಿಯ ಕೈಚಳಕದ ಜೊತೆ ಮಾನವನ ಕುಶಲತೆಯೂ ಬೆರೆತು ಅಲ್ಲೊಂದು ಅದ್ಭುತವೇ ಸೃಷ್ಟಿಯಾಗಿತ್ತು.**

■ ಸುಚೇತಾ ಕೆ.ಎನ್.

ಗ್ರೀಸ್ ದೇಶದ ರಾಜಧಾನಿಯಾದ ಅಥೆನ್ಸ್‌ನಿಂದ ಸುಮಾರು 350 ಕಿ.ಮೀ. ದೂರದಲ್ಲಿರುವ ಒಂದು ಚಿಕ್ಕ ಪಟ್ಟಣ ಕಲಂಬಾಕಾ. ಅದರ ಹಿಂಬದಿಯಲ್ಲಿ ನೂರಾರು ಮೀಟರುಗಳಷ್ಟು ಎತ್ತರಕ್ಕೆ ನಿಂತಿರುವ ಬಂಡೆಗಳ ಹಾಗೂ ಅವುಗಳನ್ನೇ ಭದ್ರ ಬುನಾದಿಯಾಗಿಸಿಕೊಂಡಿರುವ ಮೊನಾಸ್ಟರಿಗಳ ಸಂಕೀರ್ಣವೇ ಈ ಮೀಟಿಯೋರಾ.

ಮೀಟಿಯೋರಾ ಎಂದರೆ ಗಾಳಿಯಲ್ಲಿ ತೇಲುತ್ತಿರುವುದು ಎಂಬರ್ಥ ಬರುತ್ತದೆ. ಲಕ್ಷಗಟ್ಟಲೆ ವರ್ಷಗಳ ಹಿಂದೆ ಅಲ್ಲಿ ಹರಿಯುತ್ತಿದ್ದ ನದಿ ಬತ್ತಿದ್ದರಿಂದ, ಸಮುದ್ರದ ಒತ್ತುವಿಕೆಯಿಂದಾಗಿ ಮತ್ತು ಇತರ ಭೌಗೋಳಿಕ ಅಂಶಗಳ ಪರಿಣಾಮವಾಗಿ ಅಲ್ಲಿ ವಿವಿಧ ಆಕಾರಗಳ, ಗಾತ್ರಗಳ ಶಿಲೆಗಳ ಸೃಷ್ಟಿಯಾಯಿತು. ಹತ್ತಿರದಲ್ಲಿರುವ ಥಿಯೋಪೆಟ್ರಾ ಗುಹೆಗಳಲ್ಲಿ 50 ಸಾವಿರ ವರ್ಷಗಳಿಗೂ ಹಿಂದೆ ಅಲ್ಲಿ ಮನುಷ್ಯ ವಾಸವಿದ್ದ ಎಂಬುದಕ್ಕೆ ಪುರಾವೆಗಳು ದೊರೆತಿವೆ.

ನಂತರದಲ್ಲಿ ಸುಮಾರು ಹನ್ನೊಂದನೇ ಶತಮಾನದವರೆಗೂ ಮೀಟಿಯೋರಾದ ಸುತ್ತಮುತ್ತ ಮನುಷ್ಯರ ಸುಳಿವಿರಲಿಲ್ಲ. ನಂತರದಲ್ಲಿ ಕ್ರೈಸ್ತ ಸನ್ಯಾಸಿಗಳು ಆ ಎತ್ತರೆತ್ತರದ ಕೊರಕಲು, ಗುಹೆಗಳನ್ನು ತಮ್ಮ ಆವಾಸವನ್ನಾಗಿ ಮಾಡಿಕೊಂಡು ಕಟ್ಟುನಿಟ್ಟಿನ ಜೀವನಶೈಲಿಯನ್ನು ಅಳವಡಿಸಿಕೊಂಡಿದ್ದರು. 13ನೇ ಶತಮಾನದ ಹೊತ್ತಿಗೆ ಗ್ರೀಸ್ ದೇಶ ಪದೇ ಪದೇ ತುರ್ಕರ ದಾಳಿಗೆ ಒಳಗಾಗುತಿತ್ತು.

ಅಥನಸಿಯೊಸ್ ಎಂಬ ಕ್ರೈಸ್ತ ಸನ್ಯಾಸಿ ಅಥೋಸ್ ಬೆಟ್ಟದಿಂದ ಹಲವು ಅನುಯಾಯಿಗಳನ್ನು ಇಲ್ಲಿಗೆ ಕರೆತಂದನು. ಅವರಿಗಾಗಿ ನೆಲಮಟ್ಟದಿಂದ ನೂರಾರು ಅಡಿಗಳ ಎತ್ತರದಲ್ಲಿ 'ಗ್ರೇಟ್ ಮೀಟಿಯೋರಾ' ಎಂಬ ಮೊನಾಸ್ಟರಿ ಕಟ್ಟಲಾಯಿತು. ಅದನ್ನು ತಲುಪಲು